ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಸಂಡೂರು.

**OS. No. 139/2021** **P.W. 03**

ದಿನಾಂಕ **27-07-2023** ರಂದು ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲು ಶ್ರೀ ಎಂ ಬಿ ಹೆಚ್ ವಕೀಲರಿಂದ**

* * * *

ನಾನು ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ ಮತ್ತು ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ಈ ದಾವೆಯನ್ನು ವೇಂಕಟೇಶ ಎನ್ನುವರು ಹುಲಗಪ್ಪ ಅವರ ವಿರುದ್ದ ತಮ್ಮ ಹೊಲದಲ್ಲಿ ಮನೆಗಳನ್ನು ಕಟ್ಟಿಕೊಂಡ ಕಾರಣ ಹೂಡಿರುತ್ತಾರೆ. ದಾವಾ ಸ್ವತ್ತಿನಲ್ಲಿ ಮನಗೆಳನ್ನು ಕಟ್ಟಿಕೊಂಡಿರುವ ಬಗ್ಗೆ ನಾನು ದಾಖಲೆಗಳನ್ನು ನೋಡಿರುತ್ತೇನೆ. ವಾದಿ ನಮ್ಮ ಸಂಬಂಧಿಕರಾಗಬೇಕು. ಸರ್ವೆ ನಂಬರ **26** ರಲ್ಲಿ ಮನೆಗಳನ್ನು ಕಟಿಟ್ಟಿಕೊಂಡಿರುತ್ತಾರೆ ಆದರೆ ನಿಖರವಾಗಿ ಎಷ್ಟು ವಿಸ್ತೀರ್ಣದಲ್ಲಿ ಕಟ್ಟಿಕೊಂಡಿದ್ದಾರೆ ಎಂದು ನಿಖವಾಗಿ ಹೇಳಲಾಗುವುದಿಲ್ಲ. ದಾವಾ ಸ್ವತ್ತನ್ನು ಮೂಲತಃ ಈರಾಳ ಬಸಣ್ಣ ಅವರ ಸ್ವತ್ತು ಮತ್ತು ಅವರಿಂದ ಒಟ್ಟು **4** ಎಕರೆ ಜಮೀನುನ್ನು ಖರೀದಿ ಮಾಡಿರುತ್ತಾರೆ.

ಪ್ರತಿವಾದಿಗಳು ಆಶ್ರಯ ಮನೆಗಳಲ್ಲಿ ಕೊಟ್ಟ ಜಮೀನಿನಲ್ಲಿ ಅವರು ತಮ್ಮ ಮನೆಗಳನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಅಂಶಗಳು ನನಗೆ ಗೊತ್ತಿರುವುದಿಲ್ಲ ಕಾರಣ ನಾನು ಓದಿರುವುದಿಲ್ಲ. ನಾನು ವಾದಿಯ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

**ಪ್ರ.ದ.ನ್ಯಾ.ದಂ., ಸಂಡೂರು.**

ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಸಂಡೂರು.

**OS. No. 139/2021** **P.W. 02**

ದಿನಾಂಕ **27-07-2023** ರಂದು ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲು ಶ್ರೀ ಎಂ ಬಿ ಹೆಚ್ ವಕೀಲರಿಂದ**

* * * *

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ದಾವೆಯನ್ನು ವೇಂಕಟೇಶ ಎನ್ನುವರು ಹುಲಗಪ್ಪ ಅವರ ವಿರುದ್ದ ತಮ್ಮ ಹೊಲದಲ್ಲಿ ಮನೆಗಳನ್ನು ಕಟ್ಟಿಕೊಂಡ ಕಾರಣ ಹೂಡಿರುತ್ತಾರೆ. ದಾವಾ ಸ್ವತ್ತಿನ ಸರ್ವೆ ನಂಬರ 26 ಇರುತ್ತದೆ ಇದರ ವಿಸ್ತೀರ್ಣ 3 ಎಕರೆ 40 ಸೆಂಟ್ಸ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಮನಗೆಳನ್ನು ಕಟ್ಟಿಕೊಂಡಿರುವ ಬಗ್ಗೆ ಯಾವುದೆ ದಾಖಲೆಗಳನ್ನು ನೋಡಿರುವುದಿಲ್ಲ. ಸರ್ವೆ ನಂಬರ 26 ರಲ್ಲಿ ವಿಸ್ತೀರ್ಣ 1 ಎಕರೆಗೆ ಸಂಬಂದಪಟ್ಟಂತೆ ಆಶ್ರಯ ಮನೆಗಳು ನಿರ್ಮಾಣ ಆಗಿರುತ್ತವೆ ಎಂದರೆ ಸರಿ. ಸರಕಾರದಿಂದ ಕೊಟ್ಟಿರುವ ಅಶ್ರಯ ಮನೆಗಳಲ್ಲಿ ಪ್ರತಿವಾದಿಗಳು ವಾಸವಿರುತ್ತಾರೆ ಎಂದರೆ ಸರಿ.

ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಯಾವುದೆ ಅಕ್ರಮವಾಗಿ ಮನೆಗಳನ್ನು ಕಟ್ಟಿಕೊಂಡಿರುವುದಿಲ್ಲ ಅದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ವಾದಿಗಳು ಮತ್ತು ನಾವು ಒಂದೇ ಜಾತಿಯವರು ಎಂದರೆ ಸರಿ. ನಾವು ಮತ್ತು ವಾದಿ ಜಾತಿಯವರು ಆದ ಕಾರಣ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಈರಾಳ ಬಸಣ್ಣ ಅವರಿಂದ ಖರೀದಿ ಮಾಡಿರುತ್ತಾರೆ.

ದಾವಾ ಸ್ವತ್ತಿನ ಚೆಕ್ ಬಂದಿ ನನಗೆ ನಿಖರವಾಗಿ ಹೇಳಲಾಗುವುದಿಲ್ಲ. ಈ ಪ್ರಕರಣ ಬಗ್ಗೆ ನನಗೆ ಏನು ಗೊತ್ತಿರದೆ ಇದ್ದರು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

**ಪ್ರ.ದ.ನ್ಯಾ.ದಂ., ಸಂಡೂರು.**